Regd No B G 155 Sri 27—5—1965

ಸತ್ಯವಾದಿ

48th Year
Satyavadi
DAILY
MYSORE 4

ಸಂಪಾದಕರು — ಎಸ್ ವೆಂಕಟೇಶ್ವರಲು ಎಂ ಎ ಮತ್ತು ಎಸ್ ಪುಟ್ಟಣ್ಣಯ್ಯ ಸಂಪಾದಕರು — ಧರ್ಮಪ್ರಚಾರಾಲಯ ಎಂ.ಎಸ್ ಕೃಷ್ಣರಾವ್ 2ನೇ ಪುಟ

ಎಂಡು ಲಕ್ಷ ಹಸುಗಳು

ಬೆಂಗಳೂರು — 150 ಲಕ್ಷ ರೂಗಳ ಖರ್ಚಿನಿಂದ ಎಂಡು ಲಕ್ಷ ಕಾಲು ಕೊಡುವ ಹಸುಗಳನ್ನ ಬೆಂಗಳೂರು ತುಮಕೂರು ಕೋಲಾರ ಮಂಡ್ಯ ದಿಲ್ಲಿ ಪೆಡ್ ಭಾಗಗಳಲ್ಲಿ ಕೊಂಡಲು ಸರಕಾರ ಯೋಚಿಸಿದೆಯೆಂದು ಕೃಷಿಕಾಯ ಮಂತ್ರಿ ಕೃಷ್ಣಪ್ಪನವರು ಹೇಳಿದ್ದಾರೆ — ಆ ಸ್ಥಳಗಳಲ್ಲಿ 100 ಕೃತಕ ಗರ್ಭ ಕೇಂದ್ರಗಳನ್ನ ಏರ್ಪಡಿಸಲಾಗುವುದೆಂದೂ ಹೇಳಿದರು

❋

ಭಿಕ್ಷಾಟನೆ ನಿರ್ಮೂಲನ

ನವದೆಹಲಿ — ದೇಶದಲ್ಲಿ ಭಿಕ್ಷಾಟನೆ ನಿರ್ಮೂಲಗೊಳಿಸುವ ಹಾಗೂ ನಿರ್ಗತಿಕರಾಗಿರುವ ಮಕ್ಕಳಿಗೆ ಶಾಸನಗಳಿಗೆ ಸಂಪೂರ್ಣವಾದ ಕೇಂದ್ರ ಶಾಸನವೊಂದನ್ನು ಜಾರಿಗೆ ತರುವ ಪ್ರಶ್ನೆ ಪರಿಶೀಲಿಸಲಾಗುತ್ತಿದೆ.

❋

ಜಪಾನ್ ಪ್ರಧಾನಿಗಳ ಆಶಯ

ಟೋಕಿಯೋ — ಕಚ್ಚಾ ರಾಷ್ಟ್ರಗಳ ಹೊಡೆದಾಟದ ಬಗ್ಗೆ ಶಾಂತಿಯುತ ವ್ಯವಸ್ಥೆ ಮಾಡಿಕೊಳ್ಳುವಂತೆ ಏಷಿಯಾನ್ ಅಧ್ಯಕ್ಷರಿಗೂ ಭಾರತ ಪ್ರಧಾನಿಗಳಿಗೂ ತಿಳಿಸಿದ್ದಾರೆ

★

ಮೂವಿನ ಹಣ್ಣು ರಫ್ತು

ಹೈದರಾಬಾದು — ಆಂಧ್ರದ ಪ್ರಖ್ಯಾತ ಮೂವಿನಹಣ್ಣನ್ನು ಲಂಡನ್ನಿಗೆ ರಫ್ತು ಮಾಡಲು ಪರಿಶೀಲಿಸಲಾಗುತ್ತಿದೆ.

❋

ನಾಳೆಯ ಪಂಚಾಂಗ

ದೈವಜ್ಞ ಶಿರೋಮಣಿ
ಆಸ್ಥಾನವಿದ್ವಾನ್ ಧರ್ಮಾಧಿಕಾರಿ
ಜ್ಯೋತಿಷಕಾರ್ಯದಕ್ಷ, ಜ್ಯೋತಿರ್ವಿದ್ಯಾನಿಧಿ
ಪಂಪತಿ ಕೃಷ್ಣಜೋಯಿಸರಿಂದ

28 ಶುಕ್ರವಾರ ದ್ವಾ-ತ್ರ, ಅಶ್ವಿನಿ

ಪ್ರಾರಂಭ

ವೈಸೂರು — ಪ್ರಾರಂಭದ ಸಾಧಾರಣ ಅಧಿವೇಶನವು ಸೋಮವಾರ ತಾ|| 31 ಸಂಜೆ 4 ಗಂಟೆಗೆ ನಡೆಯುವುದು.

★

ಉಪಗ್ರಹ ಕೇಂದ್ರ

ಬೊಂಬಾಯಿ — ಭಾರತಕ್ಕೊಂದು ಉಪಗ್ರಹ ಕೇಂದ್ರ ಒದಗುವ ನಿರೀಕ್ಷೆ ಇದೆ.

ಪ್ರದರ್ಶನ

ಲಂಡನ್ — ಪಂ|| ನೆಹರೂರವರ ಜೀವಿತ ಚಿತ್ರಗಳ ಪ್ರದರ್ಶನವು ಜೂನ್ 10 ರಿಂದ ನಡೆಸಲಾಗುವುದು

★

ಪರೀಕ್ಷಾ ಫಲಿತಾಂಶಗಳು

ಮೈಸೂರು — ಮಾರ್ಚ್-ಏಪ್ರಿಲ್‌ನಲ್ಲಿ ನಡೆದ ಮೈಸೂರು ವಿಶ್ವವಿದ್ಯಾನಿಲಯದ ಪರೀಕ್ಷೆಗಳ ಫಲಿತಾಂಶಗಳು ಕೆಲವು ತಾ|| 29-5-65, ಕೆಲವು 31-5-65 ಕೆಲವು 2-6-65 ಪ್ರಕಟಿಸಲಾಗುತ್ತೆ.

❋

ಎಲ್ ಐ ಸಿ

ಮದರಾಸು — ಸದ್ಯದಲ್ಲಿ ವಿಮಾ ಕಂಪನಿಗಳಲ್ಲಿ ಕಡಿಮೆ ಮಾಡಲು ಸಾಧ್ಯವಿಲ್ಲವೆಂದು ಅಧ್ಯಕ್ಷರು ಹೇಳಿದರು.

ಪ್ರಧಾನಿಗಳಿಗೆ ಆಹ್ವಾನ

ನವದೆಹಲಿ — ಪ್ರಧಾನಿ ಶಾಸ್ತ್ರಿಗಳು ಜಪಾನಿಗೆ ಭೇಟಿಕೊಡಲು ಜಪಾನು ಪ್ರಧಾನಿ ಆಹ್ವಾನಿಸಿರುವರು

ನೆಹರೂರ ಪ್ರಥಮ ಪುಣ್ಯತಿಥಿ

ಈ ದಿವಸ ಜವಾಹರಲಾಲ ನೆಹರೂರವರ ಮೊದಲನೇ ಪುಣ್ಯ ತಿಥಿ ನಿನ್ನೆ ಸಂಜೆ ರಾಷ್ಟ್ರಪತಿ ಡಾ|| ರಾಧಾಕೃಷ್ಣನರು ದೇಶವನ್ನುದ್ದೇಶಿಸಿ ಭಾಷಣಮಾಡಿದರು ಈ ದಿನ ವಿಶೇಷ ಅಂಚೆ ಚೀಟಿ ಬಿಡುಗಡೆ ಆಗುವುದು ದೇಶದಾದ್ಯಂತ ಪುಣ್ಯ ತಿಥಿ ಆಚರಣೆ ಆಗುತ್ತಿದೆ.

★

ಪರಮಾಣು ಕಾರ್ಖಾನೆ

ಕರಾಚಿ — ಇಲ್ಲಿ ಪರಮಾಣು ಶಕ್ತಿ ಕಾರ್ಖಾನೆ ಸ್ಥಾಪನೆಗೆ ಕನಡಾ ದೇಶ ನೆರವು ನೀಡಲಿದೆ

ನೇಪಾಳ ವಿಚಾರ

ಕಟ್ಮಂಡು — ನೇಪಾಳವು ವಿದೇಶೀ ಸಂಬಂಧದಲ್ಲಿ ತಟಸ್ಥ ನೀತಿಯನ್ನು ಅನುಸರಿಸುವುದೆಂದು ರಾಜ ಮಹೇಂದ್ರರು ಹೇಳಿಕೆ.

ಸಂಕಾರ ಅನುಮತಿ ಕೊಡಲಿಲ್ಲ

ವಾಷಿಂಗ್ಟನ್ — ಇಲ್ಲಿ ಜೂನು 19 ರಿಂದ ಜುಲೈ 4 ರವರೆಗೆ ನಡೆಯುವ ಕಿವುಡು ಮೂಗರ ಒಲಂಪಿಕ್ 10 ನೇ ಎಳ್ಳ ಕ್ರೀಡಗಳಲ್ಲಿ ಭಾರತ ಕಿವುಡು ಮೂಗರು ಭಾಗವಹಿಸಲು ಸರಕಾರ ಅನುಮತಿ ಕೊಡಲಿಲ್ಲ

ರತ್ಯಾ - ಚೀನ

ಕೊಲಂಬೊ — ಚೀನವು ರತ್ಯಾ ವಿರುದ್ಧ ಜಲವಲಯವನ್ನು ಸಿಲೋನಿನಲ್ಲಿ ನಡೆಸುತ್ತಲಿದೆ

ಗಡಿಯಾರ ರಫ್ತು

ಮದರಾಸು — ಬೆಂಗಳೂರು—ಹೆಚ್ ಎಂ ಟಿ ಯು 1 ಲಕ್ಷ ಗಡಿಯಾರಗಳು ರಫ್ತಾಗಲಿದೆ

ಕಳ್ಳ ಸಾಗಾಣಿಕೆ

ಕೈರೊ — ಕೆಲ ದಿನಗಳ ಹಿಂದೆ ಇಲ್ಲಿ ಸಿಡಿದ ಪಾಕಿಸ್ತಾನ ವಿಮಾನದಲ್ಲಿ 50 ಸಾವಿರ ಪೌಂಡು ಅಕ್ರಮ ಶಾಗಾಣಿಕೆ ಆಭರಣಗಳಿದ್ದವೆಂದು ವರದಿ

ಯಾರ ಭೂಮಿಯೂ ಅಲ್ಲ

ಕಲ್ಕತ್ತಾ — ಪೂರ್ವ ಪಾಕಿಸ್ತಾನದೊಡನೆಯ ಅಸ್ಸಾಂಗಡಿಯನ್ನು 'ಯಾರ ಭೂಮಿಯೂ ಅಲ್ಲದಂತೆ ಮಾಡಲು ಸಾಧ್ಯವಾದ ಕೆಲಸವಲ್ಲವೆಂದು ಅಸ್ಸಾಂ ಹಣಕಾಸಿನ ಮಂತ್ರಿ ಹೇಳಿದರು ; ಅಲ್ಲಿ ರುವ 10-12 ಲಕ್ಷ ಪ್ರಜೆಗಳನ್ನು ಬೇರೆ ಕಡೆ ಇಡುವ ಸಮಸ್ಯೆ ಮತ್ತು ಆ ಸ್ಥಳವನ್ನು ಪಾಕಿಸ್ತಾನ ಆಕ್ರಮಿಸೀತೆಂಬ ವಿಷಯ ತಲೆದೋರುತ್ತದು.

❋

ಕಮ್ಯೂನಿಸ್ಟರೊಡನೆ ಪೈಪೋಟಿ

ಲಂಡನ್ — ಕಮ್ಯೂನಿಸ್ಟರು ಪ್ರಚಾರಕ್ಕಿಂತಲೂ ಹೆಚ್ಚು ಪ್ರಚಾರ ಮಾಡಲು ಟೆಲಿವಿಜನ್, ರೇಡಿಯೊ, ಸಿನಿಮಾಗಳ ರೋಮನ್ ಕಾಥಲಿಕ್ ಕೇಂದ್ರವು 50 ಲಕ್ಷ ಪೌಂಡುಗಳಿಗಾಗಿ ಮನವಿ ಮಾಡಿದೆ

❋

ದೇಶಪ್ರೇಮ

ವಾಷಿಂಗ್ಟನ್ — ಅಧ್ಯಕ್ಷರುವ ಶ್ವೇತ ಭವನದಲ್ಲಿನ ಊಟ ಮತ್ತು ಔತಣಗಳಲ್ಲಿ ಅಮೇರಿಕಾ ವೈನು ಮಾತ್ರ ಉಪಯೋಗಿಸುವಂತೆ ಅಧ್ಯಕ್ಷರು ಆಜ್ಞೆ ಯಾಗಿದೆ.

=

ಲಂಡನ್ — ತೂಕ ಮತ್ತು ಅಳತೆಯನ್ನು ವಿಟ್ರಿಕ್ ರೀತಿಗೆ ಬದಲಾಯಿಸಲು ಬ್ರಿಟಿಷ್ ಸರಕಾರ ನಿರ್ಧರಿಸಿದೆ

ನವದೆಹಲಿ — 2 ವಾರಗಳಿಂದ ಕಣ್ಣಿಗಿದ್ದ ಕಚ್-ಸಿಂಧ್ ಗಡಿಯಲ್ಲಿ ಮೊನ್ನೆ ಭಾಂತ ಕಾಲಾಳು ಪಡೆಗೂ ಪಾಕಿಸ್ತಾನ ಅರ್ಮರ್ಡ್ ಕಾರು ಪಡೆಗೂ ಬಿಯಾರ ಬೆಟ್ಟಿನಲ್ಲಿ ಹೊಡೆದಾಟವಾಗಿ ಪಾಕಿಸ್ತಾನಿಗಳ ಹಿಂದಕ್ಕಟ್ಟಲ್ಪಟ್ಟರು.

ಶಾಸ್ತ್ರಧರ್ಮ ಪ್ರಚಾರ ಸಭಾ

Sastra Dharma Prachar Sabha

(ವಂದಿವಂದುದು)

ಈಗ್ಗೆ 30 ವರ್ಷಗಳಲ್ಲಿ ಶಾಸ್ತ್ರಧರ್ಮವನ್ನು ಪ್ರಚಾರವಾಡುವ ಬಲುವಾಗಿ ಅವರು ಶಾಸ್ತ್ರಧರ್ಮ ಪ್ರಚಾರ ಸಭೆಯನ್ನು ಅವು ಪಕ್ಕಾಂಧಿಸಿ, ಪ್ರತಿ ವಾರವೂ ಶಾಸ್ತ್ರ ಉಪದೇಶ ನೀಡುವ ಬಲುವಾಗಿ 'Truth' ಎಂಬ ಆಂಗ್ಲ ಪತ್ರಿಕೆಯನ್ನೂ 'ಭಾಂತ'ಜೀವನ' ಎಂಬ ಬಂಗಳಾ ಪತ್ರಿಕೆಯನ್ನೂ ಪ್ರಾರಂಭಿಸಿದರು. ಲಕ್ಷಾಂತರ ಪುಸ್ತಕಗಳನ್ನು ತಮಿಳು, ಬಂಗಾಳಿ ಮತ್ತು ಹಿಂದಿ ಭಾಷೆಗಳಲ್ಲಿ ಮುದ್ರಣವಾಡಿಸಿ ಉಚಿತವಾಗಿ ಹಂಚಿದರು; ಇವರ ವಾದಸರಣಿ, ಮಾಡಿದ ಅನೇಕ ಪವಾಡಗಳು, ಬರೆದ ಗ್ರಂಥಗಳು ಇವುಗಳನ್ನು ನೋಡಿ ಅನೇಕ ಜನರು ತಮ್ಮ ನಾಸ್ತಿಕತೆಯನ್ನು ತೊರೆದು ಅಸ್ತಿಕರಾಗಿ ತಾವೂ ಕೂಡಾ ಧರ್ಮಪ್ರಚಾರ ಕಾರ್ಯ ಮಾಡಲು ಮುಂದಾದರು; ಈ ರೀತಿ ಸನಾತನಧರ್ಮಕ್ಕೆ ಬೆಂಬಲವೇ ಇಲ್ಲದ ಪರಿಸ್ಥಿತಿಯಲ್ಲಿ ಜಾಗೃತಿ ಮಾಡಿ ಅನೇಕ ಜನರಿಗೆ ಬೋಧನೆಮಾಡಿ ಸನಾತನ ಧರ್ಮಕ್ಕಾಗಿ ಹೋರಾಡುವ ಸಹಸ್ರಾರು ಜನರನ್ನು ಸಿದ್ಧಗೊಳಿಸಿದನಂತರ ತಮ್ಮ ಪ್ರತಿನಿಧಿಯಾಗಿ ಶಾಸ್ತ್ರಧರ್ಮಪ್ರಚಾರಸಭೆಯನ್ನು ನಿಯಮಿಸಿ 1951 ನೇ ವರ್ಷದಲ್ಲಿ ವೈಕುಂಠಕ್ಕೆ ತೆರಳಿದರು.

ಈಗ ಕಲ್ಕತ್ತಾ ಶಾಸ್ತ್ರಧರ್ಮ ಪ್ರಚಾರಸಭೆಯು ಇನ್ನೂ ಕೆಲವು ಹೊಸ ಹೊಸ ಪುಸ್ತಕಗಳನ್ನು ಮುದ್ರಣ ಮಾಡಿಸಿ ಲಕ್ಷಾಂತರ ಪ್ರತಿಗಳನ್ನು ಉಚಿತವಾಗಿ ಹಂಚಿತ್ತಿದೆ; ಸನಾತನಧರ್ಮಕ್ಕೆ ಬೆಂಬಲನೀಡಬಯಸುವ, ಶಾಸ್ತ್ರಗಳನ್ನು ತಿಳಿದು ಅದರಂತೆ ಆಚರಿಸಬಯಸುವ ಯಾವ ಹಿಂದುವಾದರೂ ಸಭೆಯ ಪ್ರತಿಜ್ಞೆಗೆ ಬದ್ಧವಾಗಿ ಸದಸ್ಯರಾಗಬಹುದು: ಅಂಥಾ ಸದಸ್ಯರ ಸಂಖ್ಯೆ ಈಗ ಮೂರು ಲಕ್ಷಕ್ಕೂ ಮಿಕ್ಕಾದೆ: ಪ್ರಪಂಚಾದ್ಯಂತ ಮುನ್ನೂರು ಶಾಖೆಗಳು ಅವರ ಬೆಂಬಲ ಪಡೆದು ಕೆಲಸಮಾಡುತ್ತಿದ್ದಾರೆ.

ಶ್ರೀ ಹರಿಯವರ ಕೃಪೆಯಿಂದ ಈಗ್ಗೆ ಏಳು ವರ್ಷಗಳಲ್ಲಿ ಹೊಂಗಸೂರಿನ ಶಾಖೆಯು ಪ್ರಾರಂಭಿಸಲ್ಪಟ್ಟು ಸಾಧ್ಯವಾಗಷ್ಟು ಮಟ್ಟಿಗೆ ಧರ್ಮಪ್ರಚಾರ ಕಾರ್ಯವನ್ನು ಮಾಡುತ್ತಿದೆ; ಅದರ ಆನೇ ವಾರ್ಷಿಕೋತ್ಸವವನ್ನು ನಾವು ಇಂದು ಆಚರಿಸುತ್ತಿದ್ದೇವೆಂಬ ವಿಚಾರ ತಮಗೆ ತಿಳಿದಿದ್ದೇ ಆಗಿದೆ. [ಸತೇಷ

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ನಡೆಯಲಿ

ವುಡ್‌ಲಾಂಡ್ 21-5-65 ರಿಂದ
ಶಿನಿ ಅಮೋಘ ಪ್ರಾರಂಭ
ಟೆಕ್ನಿಕಲರ್ ಈಸ್ಟ್‌ಮನ್ ಕಲರ್ ಚಿತ್ರ ಪ್ರತಿದಿನ 3 ಪ್ರದರ್ಶನಗಳು

ಜಾನ್‌ವರ್ (ಹಿಂದಿ) Janwar
ಶಮ್ಮಿ ಕಪೂರ್, ರಾಜಶ್ರೀ ಮತ್ತಿತರ ಸುಪ್ರಸಿದ್ಧ ತಾರೆಯರು ಪಾತ್ರವಹಿಸಿರುವರು
ಸಂಗೀತ– ಶಂಕರ್ ಜೈಕಿಷನ್ ಡೈರೆಕ್ಷನ್– ಬಬ್ಬಿ ಸೋನಿಲ್

ಒಪೆರಾ— 28-5-65 ರಿಂದ
ಅತ್ಯಮೋಘ ಕನ್ನಡ ಚಿತ್ರಕ್ಕೆ — ದಿನ 3 ಆಟಗಳು

ನನ್ನ ಕರ್ತವ್ಯ [ಕನ್ನಡ]
ತಾರಾಗಣ— ಕಲ್ಯಾಣಕುಮಾರ್, ನಾಗೇಂದ್ರರಾವ್, ನರಸಿಂಹರಾಜು, ಚಾಂದ್ರಬಾಬು, ಸಂಧ್ಯಾ, ಜಯ ಲಲಿತ,

SHAKTI SUDHA

A Superb Tonic

Help The Gorakshana

★

"ಗೋರಕ್ಷಣ"ಕ್ಕೆ ಬೆಂಬಲಿಗರಾಗಿರಿ

[ಶ್ರೀ ದ್ವಾರಕಾ ಜಗದ್ಗುರು ಮಹಾಸ್ವಾಮಿಗಳವರ್ತಿಶ್ರೀ ಶೃಂಗೇರಿ ಜಗದ್ಗುರು ಮಹಾಸ್ವಾಮಿಗಳವರ ಉದಾರ ಅನುಗ್ರಹ ಕೃಪೆಯಿಂದಾಗಿದೆ

ಕನ್ನಡನಾಡಿನಲ್ಲಿ ಗೋರಕ್ಷಣೆ, ವ್ಯಾಪಿಸಿದಯೆ, ಶಾಕಾಹಾರ, ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಪ್ರಚಾರ್ಯನಾಪತ್ರಿಕೆ.

ವಾರ್ಷಿಕ ಚಂದಾ 50 ಪೈಸೆ "ಗೋರಕ್ಷಣ"ಕ್ಕೆ ಲೇಖನಗಳನ್ನೂ ಪ್ರೋತ್ಸಾಹ ಧನವನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ– ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

Edited, Printed & Published by the Proprietor
Dharma Prachara Nirata M S Krishna Rao
at the Satyavadi Press, Chamarajapuram Mysore 4